ಹೆದರುವವಳಲ್ಲ.'

ಮಿಸ್ಟರ್ ವೈಟ್ ಮರುಮಾತನಾಡದೆ ಕೆಳಗಿಳಿದು ಹೋದ. ಅವನು ತೆಗೆದುಕೊಂಡು ಹೋದ ಮೋಂಬತ್ತಿ ಮಧ್ಯದಲ್ಲೇ ಆರಿ ಹೋಯಿತು. ಕತ್ತಲಲ್ಲಿ ತಡವುತ್ತಾ ಅವನು ಹಜಾರದ ಸ್ಟ್ಯಾಂಡಿನ ಬಳಿಗೆ ಬಂದ. ಕೋತಿಯ ಪಂಜ ಅಲ್ಲೇ ಇತ್ತು. ಫ್ಯಾಕ್ಟರಿಯಲ್ಲಿ ಮಷಿನಿಗೆ ಸಿಕ್ಕು ಭಯಂಕರವಾಗಿ ಸತ್ತಿದ್ದ ಹರ್ಬರ್ಟನ ಪ್ರತಿರೂಪ ಅವನ ಕಣ್ಣ ಮುಂದೆ ಮೂಡತೊಡಗಿತು. ಅವನು ಎದ್ದು ಬಂದದ್ದೇ ಆದರೆ, ಆ ರೂಪದಲ್ಲಿ ತಾನು ಅವನನ್ನು ಹೇಗೆ ಸ್ವಾಗತಿಸಬಲ್ಲೆ ಎಂದು ಯೋಚಿಸಿದಾಗ ಅವನು ಆ ಚಳಿಯಲ್ಲೂ ಬೆವರಿದ. ಎದೆ ಡವಗುಟ್ಟಲಾರಂಭಿಸಿತು. ಆ ಕತ್ತಲೆಯಲ್ಲಿ ಮೆಟ್ಟಿಲುಗಳನ್ನು ಹುಡುಕುತ್ತಾ ಅವನು ಅಲ್ಲಿಯೇ ತಿರುಗಲಾರಂಭಿಸಿದ. ಕಡೆಗೂ ಮಹಡಿಯ ಮೆಟ್ಟಿಲುಗಳು ಸಿಕ್ಕವು. ಅಪಶಕುನದ ಆ ಪಂಜವನ್ನು ಹಿಡಿದು ಅವನು ಮೆಟ್ಟಿಲುಗಳನ್ನು ಹತ್ತತೊಡಗಿದ.

ಅವನು ಹೆಂಡತಿಯ ಬಳಿ ಬಂದಾಗ ಅವಳು ಆತುರದಿಂದ ಅವನನ್ನೇ ಕಾಯುತ್ತಿದ್ದಳು. ಅವಳ ಮುಖ ಅವನಿಗಿಂತಲೂ ಹೆಚ್ಚಾಗಿ ಬಿಳುಚಿಕೊಂಡು ಅಮಾನುಷವಾಗಿ ಕಾಣುತ್ತಿದ್ದಳು. ಅವಳನ್ನು ನೋಡಿ ಅವನು ದಿಗಿಲುಗೊಂಡ.

'ಬೇಗ ಕೇಳಿಕೊಳ್ಳಿ...' ದೊರಗು ಸ್ವರದಲ್ಲಿ ಅವಳು ಹೇಳಿದಳು.

'ಲೇ, ಇದು ನನಗೆ ಸಹಜವೆಂದು ಅನಿಸುತ್ತಿಲ್ಲ. ಖಂಡಿತವಾಗಿಯೂ ಇದು ಸೈತಾನನ ಕೆಲಸ.' ಒಲ್ಲದ ಮನಸ್ಸಿನಿಂದ ಅವನು ಅಸಹಾಯಕನಾಗಿ ಹೇಳಿದ.

'ನೀವು ಕೇ...ಳಿ ಅಷ್ಟೇ!' ಅವಡುಗಚ್ಚುತ್ತಾ ಹೇಳಿದಳು ಮಿಸೆಸ್ ವೈಟ್.

ಬೇರೆ ದಾರಿ ಕಾಣದೆ ಮಿಸ್ಟರ್ ವೈಟ್ ಕೈಯನ್ನು ಮೇಲೆತ್ತುತ್ತಾ, 'ನನ್ನ ಮಗ ಹರ್ಬರ್ಟ್ ಜೀವಂತವಾಗಿ ಎದ್ದು ಮನೆಗೆ ಬರಲೆಂದು ಇಚ್ಛಿಸುತ್ತೇನೆ' ಎಂದು ಕಂಪಿಸುವ ದನಿಯಲ್ಲಿ ಕೇಳಿಕೊಂಡ.

ಅವನ ಕೈಗಳು ಜೋರಾಗಿ ಅದುರುತ್ತಿದ್ದವು. ಪಂಜ ಅವನ ಕೈಗಳಿಂದ ನುಣುಚಿಕೊಂಡು ಕೆಳಗೆ ಮೆಟ್ಟಿಲುಗಳ ಬುಡದಲ್ಲಿ ಬಿದ್ದು ಹೋಯಿತು. ಅವನು ಶಕ್ತಿಹೀನನಾದಂತೆ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ದೊಪ್ಪನೆ ಕುಸಿದು ಕೂತ. ಮಿಸೆಸ್ ವೈಟ್ ಕಿಟಕಿಯ ಬಳಿಗೆ ಹೋಗಿ ಪರದೆಯನ್ನು ಸರಿಸಿದಳು.

ಮಿಸ್ಟರ್ ವೈಟ್ ಬಹಳ ಹೊತ್ತು, ಅವನ ನರನಾಡಿಗಳಲ್ಲೆಲ್ಲಾ ಥಂಡಿ ತುಂಬುವವರೆಗೆ ಹಾಗೇ ಕುಳಿತುಕೊಂಡಿದ್ದ. ಆಗಾಗ್ಗೆ ಅವನ ಆತಂಕಭರಿತ ದೃಷ್ಟಿ ಕಿಟಕಿಯ ಬಳಿ ನಿಂತು ಹೊರಗೆ ನೋಡುತ್ತಿದ್ದ ಅವನ ಹೆಂಡತಿಯ ಕಡೆಗೆ ಹೊರಳುತ್ತಿತ್ತು. ಮೋಂಬತ್ತಿ ಬುಡದವರೆಗೆ ಕರಗಿತ್ತು. ಅದರ ಬೆಳಕಿನ ನೆರಳುಗಳು ಗೋಡೆಯ ಮೇಲೆ ವಿಚಿತ್ರವಾಗಿ ಹೊಯ್ದಾಡುತ್ತಿದ್ದವು. ಕೊನೆಗೆ ಒಮ್ಮೆಲೇ ಪ್ರಕಾಶಮಾನವಾಗಿ ಬೆಳಗಿ ಮೊಂಬತ್ತಿ ನಂದಿಹೋಯಿತು. ಎಲ್ಲೆಡೆ ಮತ್ತೆ ಗಾಢಾಂಧಕಾರ ಕವಿಯಿತು. ಹರ್ಬರ್ಟ್ ಬರುತ್ತಿರುವ ಯಾವ ಸೂಚನೆಗಳೂ ಕಾಣಿಸುತ್ತಿರಲಿಲ್ಲ. ಪಂಜದ ಮಾಂತ್ರಿಕ ಶಕ್ತಿ ಕ್ಷೀಣಿಸಿರುವುದು ಮಿಸ್ಟರ್ ವೈಟನಿಗೆ ಖುಷಿ ತರಿಸಿತು. ಅವನು ಮೆಲ್ಲಗೆ ಮಂಚವನ್ನು ಹತ್ತಿದ. ಕೆಲಹೊತ್ತಿನ ಬಳಿಕ ಮಿಸೆಸ್ ವೈಟ್ ಕೂಡ ಮಂಚವನ್ನು ಹತ್ತಿದಳು.

ಇಬ್ಬರ ಮಧ್ಯೆ ಮೌನ ನೆಲೆಸಿತ್ತಾದರೂ, ಗಡಿಯಾರದ ನಿರಂತರ 'ಟಿಕ್, ಟಿಕ್' ಶಬ್ದ ಕೇಳುತ್ತಾ ಅವರು ಏನೋ ಸಂಭವಿಸಲಿದೆ ಎಂಬ ಕಾತರದಿಂದ ಮೈಯೆಲ್ಲಾ ಕಿವಿಯಾಗಿ ಎದುರುನೋಡುತ್ತಿದ್ದರು. ಒಮ್ಮೆಲೆ 'ಕರ್ರ್...' ಎಂದು ಕಟ್ಟಿಗೆಯ ಮೆಟ್ಟಿಲುಗಳ ಶಬ್ದ ಅವರನ್ನು